ಒಡನಾಟದಲ್ಲಿಯೇ ಇರುತ್ತೇನೆ' ಎನ್ನುವ ನಭಾ ಈಗಾಗಲೇ ಇನ್ನೆರಡು ತೆಲುಗು ಸಿನಿಮಾಗಳಿಗೆ ಸಹಿ ಹಾಕಿದ್ದಾರಂತೆ.

ನಭಾ ಬಣ್ಣದ ಲೋಕಕ್ಕೆ ನಾಯಕಿಯಾಗಿದ್ದು ಶಿವಣ್ಣ ಅಭಿನಯದ 'ವಜ್ರಕಾಯ' ಸಿನಿಮಾದ ನಾಯಕಿಯಾಗಿ. ಅಲ್ಲಿಂದ ಇಲ್ಲಿಯವರೆಗಿನ ಪಯಣದ ಕುರಿತು ಸ್ವತಃ ನಭಾಗೇ ಬೆರಗಿದೆ.

'ಮೊದಲಿಗೆ ನನಗೆ ಸಿನಿಮಾ ಬಗ್ಗೆ ನಟನೆ ಬಗ್ಗೆ ಏನೂ ಗೊತ್ತಿರಲಿಲ್ಲ. ಚಿಕ್ಕಮಕ್ಕಳು ಎಲ್‌ಕೆಜಿಗೆ ಹೋಗುವಾಗ ಅಮ್ಮನನ್ನು ಬಿಟ್ಟು ಹೋಗಬೇಕು ಎಂದು ಅಳುತ್ತಿರುತ್ತಾವಲ್ಲ, ನನ್ನದೂ ಅದೇ ಮನಃಸ್ಥಿತಿಯಾಗಿತ್ತು. ನಿಧಾನಕ್ಕೆ ಸಿನಿಮಾದಿಂದ ಸಿನಿಮಾಗೆ ಕಲಿಯುತ್ತಾ ಹೋದೆ. ಈಗ ನನ್ನ ಕೆಲಸವನ್ನು ನಾನು ಪ್ರೀತಿಸುತ್ತೇನೆ. ಹಾಗಾಗಿ ಯಾವುದೇ ಟೆನ್ಶನ್ ಇಲ್ಲದೇ ನಿರ್ವಹಿಸಬಲ್ಲೆ' ಎಂದು ನುಡಿಯುವ ಅವರು, ನಟನೆಯಿಂದ ತಮ್ಮ ವ್ಯಕ್ತಿತ್ವದಲ್ಲಿ ಆದ ಬದಲಾವಣೆಯ ಬಗ್ಗೆಯೂ ಧನ್ಯತಾಭಾವದಿಂದ ಮಾತಾಡುತ್ತಾರೆ.

'ಜಗತ್ತನ್ನು, ಜೀವನವನ್ನು, ನನ್ನ ಸುತ್ತಲಿನ ಜನರ ಮನಸ್ಸನ್ನು ಅರ್ಥಮಾಡಿಕೊಳ್ಳಲು ನನಗೆ ನಟನೆಯ ಪಾಠಗಳು ಸಹಕಾರಿಯಾಗಿವೆ. ಯಾವುದೋ ಒಂದು ಕಾಲ್ಪನಿಕ ಪಾತ್ರಕ್ಕೆ ತೆರೆಯ ಮೇಲೆ ಜೀವತುಂಬುವುದು ಸುಲಭವಲ್ಲ. ಅದು ಸವಾಲಿನ ಕೆಲಸ. ಹಾಗೆಯೇ ನಮ್ಮ ವ್ಯಕ್ತಿತ್ವವನ್ನು ಬೆಳೆಸುವ ಪ್ರಕ್ರಿಯೆಯೂ ಹೌದು' ಎನ್ನುವುದು ಅವರ ನಂಬಿಕೆ.

ಕನ್ನಡದ ನೆಲದಲ್ಲಿ ಹುಟ್ಟಿ ತೆಲುಗು ಚಿತ್ರರಂಗದಲ್ಲಿ ಅರಳುತ್ತಿರುವ ಪ್ರತಿಭೆ ನಭಾ. 'ನಟನೆಯೇ ಒಂದು ಭಾಷೆಯಾದ್ದರಿಂದ ಅದಕ್ಕೆ ಯಾವುದೇ ಭಾಷೆಗಳು ಅಡ್ಡಿಯಾಗದು. ಚೀನಾದ ಸಿನಿಮಾವನ್ನೇ ನೋಡಿದರೂ ಅದರ ಭಾವಾಭಿವ್ಯಕ್ತಿಗಳ ಮೂಲಕ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ' ಎನ್ನುತ್ತಾರೆ. ಸಿನಿಮಾದಲ್ಲಿ ನಟಿಸುವುದಕ್ಕೋಸ್ಕರವೇ ಅವರು ತೆಲುಗನ್ನು ಕಲಿತುಕೊಂಡಿದ್ದಾರೆ. ಪ್ರತಿ ಸಿನಿಮಾಗೂ ವಿಶೇಷವಾದ ಪಾತ್ರ ಸಿದ್ಧತೆಯನ್ನು ನಡೆಸುತ್ತಾರಂತೆ.

'ಓರ್ವ ನಟಿಯಾಗಿ ಸಾಕಷ್ಟು ಭಿನ್ನ ಪಾತ್ರಗಳಲ್ಲಿ ನಟಿಸುತ್ತಿರುವ ತೃಪ್ತಿಯಿದೆ. ಇನ್ನೇನು ಬೇಕು' ಎಂದು ನಗುವ ನಭಾ, 'ಕನ್ನಡಕ್ಕೆ ಮತ್ತು ಮರಳುವುದು ಯಾವಾಗ?' ಎಂದು ಕೇಳಿದರೆ ವಿಷಾದವೋ ವಿಡಂಬನೆಯೋ ಗೊತ್ತಾಗದ ರೀತಿಯಲ್ಲಿ ನಗುತ್ತಾರೆ.

'ತುಂಬಾ ಜನರು ಇದೇ ಪ್ರಶ್ನೆ ಕೇಳುತ್ತಲೇ ಇರುತ್ತಾರೆ. ನಾನು ಕನ್ನಡದವಳು. ಈ ಭಾಷೆಯನ್ನು ನಾನು ಪ್ರೀತಿಸುತ್ತೇನೆ. ಇಲ್ಲಿನ ಸಿನಿಮಾಗಳಲ್ಲಿಯೇ ನಟಿಸಬೇಕು ಎಂಬ ಆಸೆಯೂ ಇದೆ. ಆದರೆ ಅದೊಂದೇ ಕಾರಣಕ್ಕೆ ಯಾವ ರೀತಿಯ ಅವಕಾಶ ಬಂದರೂ ನಟಿಸಲಾರೆ. ಒಳ್ಳೆಯ ಸಿನಿಮಾ, ಒಳ್ಳೆಯ ಪಾತ್ರಕ್ಕಾಗಿ ಕಾಯುತ್ತಿದ್ದೇನೆ. ಅದು ಯಾವಾಗ ಸಿಗುತ್ತದೆಯೋ ಆಗ ಖಂಡಿತ ಕನ್ನಡದಲ್ಲಿ ನಟಿಸುತ್ತೇನೆ' ಎನ್ನುವುದು ಅವರ ಮಾತು.

ತೆಲುಗಿನಲ್ಲಿ ಗಟ್ಟಿಯಾಗಿ ಬೇರೂರುತ್ತಿರುವ ಅವರಿಗೆ ಕನ್ನಡದ ಕಡೆಗೆ ಹೊರಳಿಕೊಳ್ಳುವ ಒಲವಂತೂ ಇದೆ. ಚಂದನವನದ ಸಿನಿಕರ್ಮಿಗಳು ಆ ಹಂಬಲಕ್ಕೆ ಇಂಬು ಕೊಡಬೇಕಷ್ಟೆ. ■



# ತ್ರಿವಿಕ್ರಮನ ಪರಾಕ್ರಮ

ವಿಕ್ರಮ್ ಮತ್ತು ಆಕಾಂಕ್ಷಾ ಶರ್ಮಾ

'ತ್ರಿವಿಕ್ರಮ' – ಇದು ಕನ್ನಡ ಚಿತ್ರರಂಗದಲ್ಲಿ ಪ್ರೇಮದ ಹೊನಲನ್ನೂ, ರಸಿಕತೆಯ ನದಿಯನ್ನೂ ಹರಿಸಿದ ವಿ. ರವಿಚಂದ್ರನ್ ವ್ಯಕ್ತಿತ್ವಕ್ಕೆ ಹೋಲಬಹುದಾದ ಶೀರ್ಷಿಕೆ. ಕಲ್ಪನಾಲೋಕ ಸೃಷ್ಟಿಸುವುದರಲ್ಲಿ ಅವರಿಗೆ ಮಿಗಿಲುಂಟೆ? ಆದರೆ ಈ ವಯಸ್ಸಿನಲ್ಲಿ, ನೀಡಿಕೊಂಡಷ್ಟೂ ಉಳಿಯುವ ಬೆಳ್ಳಗಿನ ಗಡ್ಡದಲ್ಲಿ ಹೀಗೆಲ್ಲ ಸಿನಿಮಾ ಮಾಡುತ್ತ ಕೂಡಲಿಕ್ಕಾಗುತ್ತದೆಯೇ? ಹಾಗಾಗಿಯೇ ಅವರ ಜವಾಬ್ದಾರಿಯನ್ನು ಅವರ ಕಿರಿಮಗ ವಿಕ್ರಮ್ ವಹಿಸಿಕೊಂಡಿದ್ದಾರೆ. 'ತ್ರಿವಿಕ್ರಮ' ಎಂಬ ಹೆಸರಿನ ಸಿನಿಮಾ ಪ್ರಾರಂಭದಿಂದಲೂ ಸುದ್ದಿ ಮಾಡುತ್ತಲೇ ಇದೆ.

ಇತ್ತೀಚೆಗೆ ಚಿತ್ರತಂಡ ಚಿತ್ರದ ಹಾಡುಗಳ ಮಾರಾಟವಾದ ಬಗ್ಗೆ ಹೇಳಿಕೊಂಡಿದೆ. ಸಿನಿಮಾಹಾಡುಗಳ ಹಕ್ಕುಗಳನ್ನು ಆಡಿಯೊ ಸಂಸ್ಥೆಯವರು ಮುಗಿಬಿದ್ದು ಖರೀದಿಸುವ ಕಾಲ ಹೋಗಿ ಯಾವುದೋ ಕಾಲವಾಯ್ತು. ಈಗೇನಿದ್ದರೂ ಚಿತ್ರತಂಡವೇ ಓಲೈಸಿ, ವಿನಮ್ರವಾಗಿ ವಿನಂತಿಸಿಕೊಂಡರೆ ಅಷ್ಟೋ ಇಷ್ಟೋ ಕಾಸು ಕೈಗಿಟ್ಟು ಆಡಿಯೊ ಹಕ್ಕು ಖರೀದಿಸಿ ಉಪಕರಿಸುವ ಕಾಲ.

ಇಂಥ ಹಾಡುಹಕ್ಕುಗಳ ಬರಗಾಲ ಕಾಲದಲ್ಲಿ 'ತ್ರಿವಿಕ್ರಮ' ಚಿತ್ರತಂಡ ಕೊಟ್ಟಿರುವುದು ನಿಜಕ್ಕೂ ಅಚ್ಚರಿಯಿಂದ ಬೆಚ್ಚಿಬೀಳುವ ಸುದ್ದಿಯೇ. 'ಎ2' ಎಂಬ ಮ್ಯೂಸಿಕ್ ಸಂಸ್ಥೆ ಈ ಚಿತ್ರದ ಹಾಡುಗಳನ್ನು ಬರೋಬ್ಬರಿ 50 ಲಕ್ಷ ರೂಪಾಯಿಗಳಿಗೆ ಕೊಂಡುಕೊಂಡಿದೆಯಂತೆ!

ಚಿತ್ರತಂಡದ ಹೇಳಿಕೆ ಪ್ರಕಾರ, ಚಿತ್ರಕ್ಕೆ ಕೋಟಿ ಕೋಟಿ ಸುರಿದಿರುವಾಗ ಹಾಡುಗಳಿಗೆ ಒಂದಿಷ್ಟು ಲಕ್ಷ ರೂಪಾಯಿ ಬೆಲೆ ಬರುವುದು ದೊಡ್ಡ ಮಾತೇ? ಅದರಲ್ಲಿಯೂ ಸರ್ಜರಿ ಸ್ಟಾರ್ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರ ಮಾಂತ್ರಿಕತೆಯಿಂದ 'ಕನ್ನಡಕ್ಕೆ ಬಂದ' ಹಾಡುಗಳಿವು. ಇದಲ್ಲದೆ ಚಿತ್ರದ ನಾಯಕ ಎಷ್ಟೆಂದರೂ ರವಿಮಾಮನ ಮಗ. ರಮ್ಯಲೋಕ ಸೃಷ್ಟಿಸುವ ಅವರ ಕಲೆ ಇವರಿಗೆ ಎಳ್ಳಷ್ಟಾದರೂ ಬರದೇ ಹೋದೀತೆ? ■



# ಹೊಸ ಸಿನಿಮಾ ತಯಾರಿಯಲ್ಲಿ ಹೇಮಂತ್

'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಸಿನಿಮಾದ ಮೂಲಕ ಚಿತ್ರರಂಗ ತಮ್ಮತ್ತ ಹೊರಳಿನೋಡುವಂತೆ ಮಾಡಿದ ಯುವನಿರ್ದೇಶಕ ಹೇಮಂತ್ ರಾವ್. ಅವರ ಎರಡನೇ ಸಿನಿಮಾ 'ಕವಲು ದಾರಿ' ಕೂಡ ಸಾಕಷ್ಟು ಚರ್ಚೆಗೆ ಒಳಗಾಗಿದ್ದಷ್ಟೇ ಅಲ್ಲ, ನಿರ್ಮಾಪಕರ ಜೇಬನ್ನೂ ತುಂಬಿಸಿತ್ತು.

ಸಿನಿಮಾ ಸ್ಕ್ರಿಪ್ಟ್‌ಗೆ ತುಂಬ ಮಹತ್ವ ಕೊಡುವ ಹೇಮಂತ್, ಅದಕ್ಕಾಗಿ ಸಾಕಷ್ಟು ಸಮಯವನ್ನೂ ವ್ಯಯಿಸುತ್ತಾರೆ. ಹಾಗಾಗಿಯೇ ಅವರ ಮೊದಲ ಸಿನಿಮಾಗೂ ಎರಡನೇ ಸಿನಿಮಾಗೂ ನಡುವೆ ಮೂರು ವರ್ಷಗಳ ಅಂತರವಿದೆ. ಮೊದಲ ಸಿನಿಮಾದ ನಂತರ ಯುವ ಪ್ರತಿಭಾವಂತರ ಸಿನಿಮಾಗೆ ಬಂಡವಾಳ ಹೂಡುವ ಕೆಲಸದಲ್ಲಿಯೂ ತೊಡಗಿಕೊಂಡಿದ್ದಾರೆ. ಹಾಗಿದ್ದರೆ ಅವರ ಮುಂದಿನ ಸಿನಿಮಾ ಬರುವುದು ಯಾವಾಗ?

ಈಗಾಗಲೇ ಶಿವರಾಜ್‌ಕುಮಾರ್ ಅವರಿಗೆ ಒಂದು ಕಥೆಯನ್ನು ಹೇಳಿದ್ದು, ಒಪ್ಪಿಗೆಯನ್ನೂ ಪಡೆದುಕೊಂಡಿದ್ದಾರಂತೆ. 'ನಾನು ಹೇಮಂತ್ ಅವರ ಜೊತೆಗೆ ಒಂದು ಸಿನಿಮಾ ಮಾಡುತ್ತಿದ್ದೇನೆ' ಎಂದು ಸ್ವತಃ ಶಿವಣ್ಣನೇ ಹೇಳಿಕೊಂಡಿದ್ದಾರೆ.

ಶಿವರಾಜ್‌ಕುಮಾರ್ ಮತ್ತು ಹೇಮಂತ್ ರಾವ್ ಕಾಂಬಿನೇಷನ್ ಹೇಗಿರಬಹುದು? ಯಾವ ಜಾನರ್ ಸಿನಿಮಾ ಮಾಡಬಹುದು? ಯಾವಾಗ ಶುರುವಾಗುತ್ತದೆ? ಯಾವಾಗ ರಿಲೀಸ್ ಆಗಬಹುದು? ಹೀಗೆ ಹತ್ತು ಹಲವು ಪ್ರಶ್ನೆಗಳು ಹುಟ್ಟುವುದು ಸಹಜ. ಆದರೆ ಈ ಬಗ್ಗೆ ಸದ್ಯಕ್ಕಂತೂ ನಿಖರ ಮಾಹಿತಿಗಳಿಲ್ಲ. ■